ಸಂಖ್ಯೆ: 2419310/2419224

Email:gardendepartment.uom@gmail.com
www.uni.mysore.ac.in

# ಮೈಸೂರು ವಿಶ್ವವಿದ್ಯಾನಿಲಯ

(4ನೇ ಆವೃತ್ತಿಯ ನ್ಯಾಕ್ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ
(ಎನ್.ಐ.ಆರ್.ಎಫ್.-2023: ವಿಶ್ವವಿದ್ಯಾನಿಲಯ ವರ್ಗದಲ್ಲಿ 44ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 71ನೇ ಸ್ಥಾನ

ತೋಟಗಾರಿಕೆ ವಿಭಾಗ
ಮಾನಸಗಂಗೋತ್ರಿ, ಮೈಸೂರು–570006

ಸಂ.ಯುಜಿಡಿ/412/2023–24 ದಿನಾಂಕ:12.02.2024

## ಪ್ರಕಟಣೆ

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗದ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ **ಹುಣಸೆ ಮತ್ತು ಮಾವು ಫಸಲಿನ ಟೆಂಡರ್ ಕಂ ಬಹಿರಂಗ ಹರಾಜನ್ನು ದಿನಾಂಕ 21.02.2024ರಂದು ಬೆಳಿಗ್ಗೆ 11–00ಕ್ಕೆ ನರ್ಸರಿ ತೋಟದಿಂದ ಹರಾಜು ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.** ಸದರಿ **ಬಹಿರಂಗ ಹರಾಜು** ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಗಡ ಹಣ ರೂ.6,000/–(ಆರು ಸಾವಿರ ರೂಪಾಯಿ]ಗಳ ನಗದನ್ನು ಠೇವಣಿಯನ್ನಾಗಿ ಹರಾಜು ಸ್ಥಳದಲ್ಲಿ ಪಾವತಿಸಿದ ನಂತರವೇ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಬಿಡ್ ಮಾಡಬಹುದು. **ಬಹಿರಂಗ ಹರಾಜಿನ** ಯಶಸ್ವಿ ಬಿಡ್‌ದಾರರು ಪೂರ್ತಾ ಹಣವನ್ನು ಸ್ಥಳದಲ್ಲೇ ಪಾವತಿಸತಕ್ಕದ್ದು.

ಈ ಬಗ್ಗೆ ಹೆಚ್ಚಿನ ವಿವರಗಳಿಗೆ : ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (ದೂರವಾಣಿ ಸಂಖ್ಯೆ:2419310)

ಸಹಾಯಕ ನಿರ್ದೇಶಕ
**ಸಹಾಯಕ ನಿರ್ದೇಶಕ**
ತೋಟಗಾರಿಕೆ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು-570 006

12/2/24

ಪ್ರತಿ:

1) ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2) ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3) ಕುಲಸಚಿವರು ಪರೀಕ್ಷಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4) ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು
5) ಕಾರ್ಯಪಾಲಕ ಅಭಿಯಂತರರು, ಮಾನಸಗಂಗೋತ್ರಿ, ಮೈಸೂರು

} ತಮ್ಮ ವಿಭಾಗಗಳ ಸೂಚನಾ ಫಲಕದಲ್ಲಿ ಅಳವಡಿಸಲು ಕೋರಲಾಗಿದೆ.

6) ಭದ್ರತಾಧಿಕಾರಿಗಳು, ಇಂಜಿನಿಯರಿಂಗ್ ವಿಭಾಗ,ಮಾನಸಗಂಗೋತ್ರಿ, ಮೈಸೂರು –
ದಿನಾಂಕ 21.02.2024ರಂದು ಬೆಳಿಗ್ಗೆ 11–00ಕ್ಕೆ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರಲಾಗಿದೆ.

ದೂರವಾಣಿ ಸಂಖ್ಯೆ: 2419310/2419224

Email:gardendepartment.uom@gmail.com
www.uni.mysore.ac.in

# ಮೈಸೂರು ವಿಶ್ವವಿದ್ಯಾನಿಲಯ

(4ನೇ ಆವೃತ್ತಿಯ ನ್ಯಾಕ್ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ
(ಎನ್.ಐ.ಆರ್.ಎಫ್.-2023: ವಿಶ್ವವಿದ್ಯಾನಿಲಯ ವರ್ಗದಲ್ಲಿ 44ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 71ನೇ ಸ್ಥಾನ

ತೋಟಗಾರಿಕೆ ವಿಭಾಗ
ಮಾನಸಗಂಗೋತ್ರಿ, ಮೈಸೂರು-570006

ದಿನಾಂಕ: 12.02.2024

## 2023-24ನೇ ಸಾಲಿನ ಹುಣಸೆ ಮತ್ತು ಮಾವು ಫಸಲಿನ ಟೆಂಡರ್ ಕಂ. ಬಹಿರಂಗ ಹರಾಜಿನ 'ಷರತ್ತುಗಳು'

1. **ಹುಣಸೆ ಮತ್ತು ಮಾವು** ಫಸಲಿನ ಬಹಿರಂಗ ಹರಾಜು ಜರುಗುವ ಮುಂಚಿತವಾಗಿ ಬಿಡ್‌ದಾರರು ರೂ.6000/-[ಆರು ಸಾವಿರ ರೂಪಾಯಿ] ಇ.ಎಂ.ಡಿ. ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು.
2. ಇ.ಎಂ.ಡಿ. ಮೊತ್ತವನ್ನು ಸೆಕ್ಯೂರಿಟಿ ಬಿಡ್ ಎಂದು ಪರಿಗಣಿಸಿ ಸದರಿ ಮೊತ್ತವನ್ನು ಫಸಲಿನ ಹಕ್ಕಿನ ಅವಧಿಯು ಅಂತ್ಯವಾದ ನಂತರ ಹಿಂದಿರುಗಿಸಲಾಗುವುದು.
3. ಹರಾಜಿನಲ್ಲಿ ಅಂತಿಮ ಬಿಡ್ ಮಾಡಿದವರು ಸ್ಥಳದಲ್ಲೇ ಪೂರ್ತಾ ಹಣವನ್ನು ಸಂದಾಯ ಮಾಡತಕ್ಕದ್ದು.
4. ಸದರಿ ಹರಾಜಿಗೆ ಸಂಬಂಧಪಟ್ಟ ಮರಗಳ ಫಸಲನ್ನು ಕೀಳುವಾಗ ಯಾವುದೇ ಮರಗಳಿಗಾಗಲೀ ಅಥವಾ ವಿಶ್ವವಿದ್ಯಾನಿಲಯದ ಇನ್ನಾವುದೇ ಆಸ್ತಿಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದು.
5. ಟೆಂಡರ್ ಸಲ್ಲಿಸುವವರು ರೂ.6,000/-ಗಳಿಗೆ ಡಿ.ಡಿ.ಯನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಹೆಸರಿನಲ್ಲಿ ಪಡೆದು ಮುಚ್ಚಿದ ಲಕೋಟೆಯೊಂದಿಗೆ ದಿನಾಂಕ **20.02.2024ರ ಸಂಜೆ 5-00ಗಂಟೆಯೊಳಗಾಗಿ** ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕೆ ವಿಭಾಗ, ಮಾನಸಗಂಗೋತ್ರಿ, ಮೈಸೂರು-570 006 ಇವರಿಗೆ ಸಲ್ಲಿಸತಕ್ಕದು.
6. ಟೆಂಡರ್ ಕಂ. ಬಹಿರಂಗ ಹರಾಜಿನ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರ ನಿರ್ಧಾರವೇ ಅಂತಿಮವಾಗಿರುತ್ತದೆ.
7. ಹರಾಜಿನಲ್ಲಿ ಫಸಲುಗಳನ್ನು ತೆಗೆದುಕೊಂಡವರು, ಅನುಮತಿ ಪಡೆದ ನಂತರ ಸದರಿ ಬಿಡ್ ಮಾಡಿದ ಫಸಲುಗಳು ಹರಾಜು ಜರುಗಿದ ದಿನಾಂಕದಿಂದ ಪ್ರಸ್ತಕ ಫಸಲಿಗೆ ಮಾತ್ರ ಒಳಪಟ್ಟಿರುತ್ತದೆ.
8. ಯಶಸ್ವಿ ಬಿಡ್‌ದಾರರು ಪ್ಯಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಪ್ರತಿಯನ್ನು ನೀಡತಕ್ಕದ್ದು.
9. ಯಶಸ್ವಿ ಬಿಡ್‌ದಾರರು ಮಾರಾಟ ತೆರಿಗೆಯನ್ನು ಪಾವತಿಸಬೇಕಿರುತ್ತದೆ.
10. ಈ ಬಗ್ಗೆ ಹೆಚ್ಚಿನ ವಿವರಗಳಿಗೆ : ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0821-2419310

-=-0-=-

ಸಹಾಯಕ ನಿರ್ದೇಶಕ
ತೋಟಗಾರಿಕೆ ವಿಭಾಗ